ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.**

ಸಂಖ್ಯೆ:ಸಿ5[1] ಲೆ.ಅ.ಬಡ್ತಿ-17/2020-21 ದಿನಾಂಕ: 09-09-2020

**ಜ್ಞಾಪನ**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರಿಗೆ ಲೆಕ್ಕಾಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿದ್ದು ಬಡ್ತಿ ಮುಂದೂಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:11-08-2020ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡವಳಿ.

2. ಈ ಕಛೇರಿ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ: 11/08/2020.

3. ನೌಕರರು ಸಲ್ಲಿಸಿರುವ ಲಿಖಿತ ಮನವಿಗಳು

*****

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಪ್ರಥಮ ದರ್ಜೆ ಸಹಾಯಕರಿಗೆ ಜ್ಯೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಲೆಕ್ಕಾಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲು ಉಲ್ಲೇಖ[1]ರ ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಣಯಿಸಲಾಗಿ ಹಾಗೂ ಉಲ್ಲೇಖ-2 ರ ಅಧಿಸೂಚನೆಯಂತೆ ಲೆಕ್ಕಾಧೀಕ್ಷಕರ ಹುದ್ದೆಗೆ ವೇತನ ಶ್ರೇಣಿ ರೂ 40900-78200 ರಲ್ಲಿ ಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಜ್ಞಾಪನದಲ್ಲಿ ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೇಮಕಾತಿ] ನಿಯಮಗಳು-1977ರ ನಿಯಮ 4ಎ ರಂತೆ ಬಡ್ತಿ ನೀಡಲಾದ ನೌಕರರು ಅಂಥ ಬಡ್ತಿಯನ್ನು ಹೊಂದಲು ಇಚ್ಚಿಸದಿದ್ದರೆ, ಉಲ್ಲೇಖ-2ರ ಆದೇಶದ ದಿನಾಂಕದಿಂದ [ಸದರಿ ಆದೇಶದ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ www.schooleducation.kar.in ನಲ್ಲಿ ಪ್ರಕಟಿಸಲಾಗಿದೆ.] 15 ದಿನಗಳ ಒಳಗೆ ನೀಡಲಾದ ಬಡ್ತಿಯನ್ನು ಬಿಟ್ಟುಕೊಡಲು ನೇಮಕ ಪ್ರಾಧಿಕಾರದ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಉಲ್ಲೇಖ-03 ರಂತೆ ಈ ಕೆಳಕಂಡ ನೌಕರರು ಲೆಕ್ಕಾಧೀಕ್ಷಕರ ಹುದ್ದೆಗೆ ನೀಡಿರುವ ಬಡ್ತಿಯನ್ನು ತಾತ್ಕಾಲಿಕವಾಗಿ ಮುಂದೂಡಲು ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ಪ್ರ.ದ.ಸ ಜ್ಯೇಷ್ಠತಾ ಸಂಖ್ಯೆ | ನೌಕರರ ಹೆಸರು, ಪದನಾಮ ಮತ್ತು ಕಛೇರಿ ವಿಳಾಸ ಶ್ರೀ/ಶ್ರೀಮತಿ |
|---|---|---|
| 1 | 1174 | ಎನ್.ಲೋಕೇಶ್, ಪ್ರಥಮ ದರ್ಜೆ ಸಹಾಯಕರು, ಉಪನಿರ್ದೇಶಕರ ಕಛೇರಿ, ಬೆಂಗಳೂರು ಉತ್ತರ ಜಿಲ್ಲೆ. |
| 2 | 1322 | ಎಂ.ಲಲಿತಾ ದೇವಿ, ಪ್ರಥಮ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-3, ಕೆ.ಕಾಮರಾಜ ರಸ್ತೆ, ಬೆಂಗಳೂರು-42 |
| 3 | 1417 | ಜಿ.ಶೈಲಶ್ರೀ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ) ಬೆಂಗಳೂರು. |
| 4 | 1731 | ಶಶಿಧರಶರ್ಮ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪ್ರೌಢಶಾಲೆ, ಕೆ.ಬೆಳ್ತೂರು, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು. |
| 5 | 1909 | ಹೆಚ್ ಎಂ ಮನೋಜ್ ಕುಮಾರ್ ಪೈ, ಪ್ರಥಮ ದರ್ಜೆ ಸಹಾಯಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು |

ಈ ಮೇಲ್ಕಂಡ ನೌಕರರುಗಳ ಕೋರಿಕೆಯನ್ನು ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:57:ಎಸ್‌ಆರ್‌ಆರ್:2001 ದಿನಾಂಕ:22.05.2002ರಲ್ಲಿ ವಿಷದಪಡಿಸಿರುವಂತೆ, ಕರ್ನಾಟಕ ನಾಗರಿಕ ಸೇವಾ ನಿಯಮ [ಸಾಮಾನ್ಯ ನೇಮಕಾತಿ ನಿಯಮಗಳು] 1977ರಲ್ಲಿನ 4.ಎ ರಂತೆ ಪರಿಗಣಿಸಿ ಸದರಿಯವರಿಗೆ ಒಂದು ವರ್ಷ ಅಥವಾ ಮುಂದೆ ನೀಡುವ ಪದೋನ್ನತಿ ಇದರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಪ್ರಥಮ ದರ್ಜೆ ಸಹಾಯಕರಾಗಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಮುಂದುವರೆಯಲು ಅನುಮತಿ ನೀಡಿದೆ.

(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)

C.M

[ಮಂಜುನಾಥ ಸಿ]
ಜಂಟಿ ನಿರ್ದೇಶಕರು (ಆಡಳಿತ)

**ಪ್ರತಿಗಳು:**

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
02. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
03. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
04. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
05. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರ ಮುಖಾಂತರ)
06. ಸಂಬಂಧಿಸಿದ ಶಾಲಾ/ಕಾಲೇಜು/ಕಛೇರಿ ಮುಖ್ಯಸ್ಥರುಗಳಿಗೆ ಮುಂದಿನ ಕ್ರಮಕ್ಕಾಗಿ.
07. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
08. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ, ಆಯುಕ್ತರ ಕಛೇರಿ ರವರು ಈ ಜ್ಞಾಪನವನ್ನು ಇಲಾಖಾ ಅಧಿಕೃತ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲು ತಿಳಿಸಿದೆ.
09. ಸಂಬಂಧಿಸಿದ ನೌಕರರುಗಳಿಗೆ. (ಇಲಾಖಾ ವೆಬ್ ಸೈಟ್ ಮೂಲಕ)
10. ಕಛೇರಿ ಪ್ರತಿ.